# ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಲಬುರಗಿ.

## ಅಧಿಸೂಚನೆ ಸಂಖ್ಯೆ:09/2025 ದಿನಾಂಕ:14.10.2025

ವಿಷಯ : ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಲಬುರಗಿಯ ಕಾನೂನು ಅಭಿರಕ್ಷಕ ಕಛೇರಿಯಲ್ಲಿ ಸಹಾಯಕ / ಗುಮಾಸ್ತ 01 ಹುದ್ದೆಗೆ ಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕ ಅವಧಿಗೆ ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸುವ ಕುರಿತು.

ಉಲ್ಲೇಖ 1 ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು ಇವರ ಪತ್ರ ಸಂಖ್ಯೆಃಕರಾಕಾಸೇಪ್ರಾಃ31/LADC-Human Resources ದಿನಾಂಕ:08.10.2025

2 NALSA- Legal Aid Defense Counsel Modified Scheme-2022.

******

<u>ಪ್ರಸ್ತಾವನೆ:</u>

ಕಲಬುರಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಲ್ಲಿ ಕಲಬುರಗಿಯ ಕಾನೂನು ಅಭಿರಕ್ಷಕ ಕಛೇರಿಯಲ್ಲಿ **1-**ಆಡಳಿತ ಸಹಾಯಕ / ಗುಮಾಸ್ತ ಹುದ್ದೆಗೆ ಗುತ್ತಿಗೆ ಆಧಾರದಲ್ಲಿ ತಾತ್ಕಾಲಿಕ ಅವಧಿಗೆ ಅಂದರೆ **06** ತಿಂಗಳ ಅವಧಿಗೆ, ಕರ್ತವ್ಯ ನಿರ್ವಹಣೆಯು ತೃಪ್ತಿಕರವಾಗಿದ್ದಲ್ಲಿ ಸದರಿ ಹುದ್ದೆಗಳನ್ನು ಮುಂದುವರೆಯಬಹುದಾದ ಅವಧಿಗೆ ತುಂಬಿಕೊಳ್ಳಲು ಉಲ್ಲೇಖದ ಪತ್ರದಲ್ಲಿ ತಿಳಿಸಲಾಗಿರುತ್ತದೆ. ಅದೇ ರೀತಿ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಇವರ ಪತ್ರ ದಿನಾಂಕ **08.10.2025** ರಲ್ಲಿ ಮೇಲ್ಕಂಡ ಹುದ್ದೆಗೆ ಸಂಬಂಧಿಸಿದಂತೆ ವಿದ್ಯಾರ್ಹತೆ, ವೇತನ ಮತ್ತು ನಿರ್ವಹಿಸಬೇಕಾದ ಕರ್ತವ್ಯ ಹಾಗೂ ಹುದ್ದೆಯ ಕಾಲಾವಧಿ ಇತ್ಯಾದಿ ಬಗ್ಗೆ ತಿಳಿಸಲಾಗಿರುತ್ತದೆ.

1. ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಲಬುರಗಿಯಲ್ಲಿ ಕಾನೂನು ಅಭಿರಕ್ಷಕ ಕಛೇರಿಯಲ್ಲಿ ಆಡಳಿತ ಸಹಾಯಕ/ಗುಮಾಸ್ತ ಹುದ್ದೆಗೆ, ಗುತ್ತಿಗೆ ಆಧಾರದ ಮೇಲೆ, ಉಲ್ಲೇಖ ನಮೂದಿಸಿರುವ ಪತ್ರಗಳಲ್ಲಿನ ಷರತ್ತುಗಳನ್ನು ಒಳಗೊಂಡಂತೆ ಅರ್ಹ ಅಭ್ಯರ್ಥಿಗಳಂದ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

| ಕ್ರ. ಸಂ. | ಹುದ್ದೆಯ ಹೆಸರು | ಹುದ್ದೆಗಳ ಸಂಖ್ಯೆ | ಮಾಸಿಕ ವೇತನ |
|---|---|---|---|
| 1. | ಆಡಳಿತ ಸಹಾಯಕ/ಗುಮಾಸ್ತ ಗುತ್ತಿಗೆ | 1 | ಲೀಗಲ್ ಏಡ ಡಿಫೆನ್ಸ ಕೌನ್ಸಿಲ್ ಮೊಡಿಫೈಡ ಸ್ಕೀಮ-2022 ಪ್ರಕಾರ |

<u>ವಿದ್ಯಾರ್ಹತೆ:</u>

**1.** ಆಡಳಿತ ಸಹಾಯಕ/ಗುಮಾಸ್ತ ಹುದ್ದೆಗೆ ಸರ್ಕಾರದಿಂದ ಮಾನ್ಯತೆಗೊಂಡಂತಹ ಯಾವುದೇ ವಿಶ್ವವಿದ್ಯಾನಿಲಯದಿಂದ ಪದವಿ ಪಡೆದಿರಬೇಕು.

**2.** ಕಂಪೂಟರ ನಿರ್ವಹಣೆ ಹಾಗೂ ಅದರ ಮೂಲಕ ಕೆಲಸ ಮಾಡುವ ಕೌಶಲ್ಯ ಹೊಂದಿರಬೇಕು.

**3.** ಉತ್ತಮ ಟೈಪಿಂಗ್ ಕೌಶಲ್ಯ ಹೊಂದಿರಬೇಕು.

**4.** ಉಕ್ತಲೇಖನ ತೆಗೆದುಕೊಳ್ಳುವ ಸಾಮರ್ಥ್ಯ ಹೊಂದಿರಬೇಕು.

**5.** ಕಛೇರಿ ಕಡತಗಳನ್ನು ನಿರ್ವಹಿಸುವ ಜ್ಞಾನ ಹೊಂದಿರಬೇಕು.

**6.** ಪ್ರಾಧಿಕಾರದಲ್ಲಿ ಕಾರ್ಯನಿರ್ವಹಿಸಲು ಆಸಕ್ತಿ ಹೊಂದಿರಬೇಕು.

2. <u>ಅರ್ಜಿ ಸಲ್ಲಿಕೆಯ ದಿನಾಂಕ:</u>

ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: **14.10.2025**

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **25.10.2025**

3. <u>ಅರ್ಜಿ ಸಲ್ಲಿಸುವ ವಿಧಾನ:</u>

ಅರ್ಹ ಅಭ್ಯರ್ಥಿಗಳು ಈ ಅಧಿಸೂಚನೆಯೊಂದಿಗೆ ನೀಡಿರುವ ನಮೂನೆಯಲ್ಲಿ ತಮ್ಮ ಸಂಪೂರ್ಣ ಮಾಹಿತಿಯನ್ನು ಭರ್ತಿಮಾಡಿ ಈ ಕೆಳಕಂಡ ದಾಖಲೆಗಳೊಂದಿಗೆ ಹಾಗೂ ಪಾಸ್‌ಪೋರ್ಟ್ ಅಳತೆಯ **2** ಇತ್ತೀಚಿನ ಭಾವಚಿತ್ರಗಳೊಂದಿಗೆ ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯಾಲಯ ಆವರಣ, ಕಲಬುರಗಿ ಇಲ್ಲಿಗೆ ಕೊನೆಯ ದಿನಾಂಕದೊಳಗಾಗಿ ಅಂದರೆ ದಿನಾಂಕ:**25.10.2025** ರೊಳಗಾಗಿ ಸಲ್ಲಿಸತಕ್ಕದ್ದು ಹಾಗೂ ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು

- ಎಸ್.ಎಸ್.ಎಲ್.ಸಿ ಅಂಕಪಟ್ಟಿ
- ಪದವಿ ವಿದ್ಯಾರ್ಹತೆ ಅಂಕಪಟ್ಟಿ
- ಪ್ರೌಢ ದರ್ಜೆಯಲ್ಲಿ ಕನ್ನಡ ಮತ್ತು ಇಂಗ್ಲೀಷ ಬೆರಳಚ್ಚು ಪ್ರಮಾಣ ಪತ್ರ
- ಕಂಪ್ಯೂಟರ್ ಜ್ಞಾನ ಹೊಂದಿದ ಬಗ್ಗೆ ಪ್ರಮಾಣ ಪತ್ರ
- ಆಧಾರ ಕಾರ್ಡ / ಚುನಾವಣೆ ಗುರತಿನ ಪತ್ರ / ವಾಹನ ಚಾಲನ ಪತ್ರ (ವಿಳಾಸದ ಗುರುತಿಗಾಗಿ)

4. <u>ನೇಮಕಾತಿ ವಿಧಾನ:</u>

i. ಆಡಳಿತ ಸಹಾಯಕ-ವ-ಗುಮಾಸ್ತ ಹುದ್ದೆಗೆ ಸಂಬಂಧಿಸಿದಂತೆ ಕೌಶಲ್ಯ ಪರೀಕ್ಷೆ, ಬೆರಳಚ್ಚು ಪರೀಕ್ಷೆ (ಕನ್ನಡ ಮತ್ತು ಇಂಗ್ಲೀಷನಲ್ಲಿ ತಲಾ 10 ನಿಮಿಷಗಳ ಉಕ್ತಲೇಖನಕ್ಕೆ ಬೆರಳಚ್ಚು ಮಾಡುವ ಪರೀಕ್ಷೆ) ಯಲ್ಲಿ ಗಳಿಸುವ ಅಂಕಗಳ ಆಧಾರದ ಮೇಲೆ ಹಾಗೂ ಸಂದರ್ಶನದಲ್ಲಿ ಗಳಿಸುವ ಅಂಕಗಳ ಆಧಾರದ ಮೇಲೆ, ಕಂಪ್ಯೂಟರ್ ಮತ್ತು ಬೆರಳಚ್ಚು ನಿಖರತೆ ಮತ್ತು ನೈಪುಣ್ಯತೆ ಆಧರಿಸಿ ನೇಮಕಾತಿ ಮಾಡಲಾಗುವುದು.

## 5. ಷರತ್ತುಗಳು:

- ಸದರಿ ಹುದ್ದೆಗೆ ಅಭ್ಯರ್ಥಿಗಳನ್ನು ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗುವುದು ಹಾಗೂ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ 06 ತಿಂಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ (ಯಾವುದು ಮೊದಲೋ ಅಲ್ಲಿಯವರೆಗೆ) ನೇಮಕ ಮಾಡಿಕೊಳ್ಳಲಾಗುವುದು.
- ಅಭ್ಯರ್ಥಿಗಳ ನೇಮಕಾತಿಯು ಗೌರವಾನ್ವಿತ ಕಾರ್ಯ ನಿರ್ವಾಹಕ ಅಧ್ಯಕ್ಷರು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಬೆಂಗಳೂರು ಇವರ ಅನುಮೊದನೆಗೆ ಒಳ ಪಟ್ಟಿರುತ್ತದೆ.
- ಸದರಿ ಹುದ್ದೆಯು ಸಂಪೂರ್ಣ ತಾತ್ಕಾಲಿಕವಾಗಿದ್ದು, ನೇಮಕಗೊಂಡ ಅಭ್ಯರ್ಥಿಯು ಸದರಿ ಹುದ್ದೆಯಲ್ಲಿ ಅವರನ್ನು ಖಾಯಂಗೊಳಿಸಲು ಯಾವುದೇ ಹಕ್ಕನ್ನು ಪ್ರತಿಪಾದಿಸಲು ಅವಕಾಶವಿರುವುದಿಲ್ಲ.
- ಸದರಿ ಹುದ್ದೆಗೆ ನಿಗದಿಗೊಳಿಸಿರುವ ಮಾಸಿಕ ಸಂಭಾವನೆಯು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ನಿರ್ಧರಿಸಲ್ಪಟ್ಟಿದ್ದು, ಈ ಕುರಿತು ಸರ್ಕಾರದಿಂದ ಅಥವಾ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದಿಂದ ಮುಂದೆ ಹೊರಡಿಸಬಹುದಾದ ಮಾರ್ಗಸೂಚಿಗಳಿಗೆ ಅನುಸಾರ ಬದಲಾವಣೆಗೆ ಒಳಪಡುವಂತಹ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
- ನೇಮಕಗೊಂಡ ಅಭ್ಯರ್ಥಿಯ ಕರ್ತವ್ಯವು ತೃಪ್ತಿಕರವಾಗಿಲ್ಲವೆಂದು ಕಂಡುಬಂದಂತಹ ಸಂದರ್ಭದಲ್ಲಿ ಯಾವುದೇ ಮುನ್ಸೂಚನೆ ಇಲ್ಲದೇ ಕೆಲಸದಿಂದ ತೆಗೆದುಹಾಕಲಾಗುವುದು.
- ನೇಮಕಗೊಂಡ ಅಭ್ಯರ್ಥಿಯು ಅಗತ್ಯಬಿದ್ದರೆ ಸಾರ್ವತ್ರಿಕ ರಜಾ ದಿನಗಳಲ್ಲೂ ಸಹ ಕಚೇರಿ ಕರ್ತವ್ಯ ನಿರ್ವಹಿಸಲು ಬದ್ಧರಾಗಿರತಕ್ಕದ್ದು.
- ನೇಮಕಗೊಂಡ ಅಭ್ಯರ್ಥಿಗಳು ತಮ್ಮ ಕರ್ತವ್ಯದಲ್ಲಿ ಸದಾ ಶಿಸ್ತು ಬದ್ಧರಾಗಿರತಕ್ಕದ್ದು ಹಾಗೂ ಯಾವುದೇ ದುರ್ನಡತೆ, ಅಶಿಸ್ತು ತೋರಿದರೆ ಅಥವಾ ಹಣಕಾಸು ದುರುಪಯೋಗ ಮಾಡಿರುವುದು ಕಂಡು ಬಂದಲ್ಲಿ ನಿಯಮಾನುಸಾರ ಶಿಕ್ಷೆಗೆ ಮತ್ತು ದಂಡನೆಗೆ ಗುರಿಪಡಿಸಲಾಗುವುದು.

- ಯಾವುದೇ ಕಾರಣಗಳಿಂದ ಅಭ್ಯರ್ಥಿಗಳು ತಮ್ಮ ಹುದ್ದೆಗೆ ತ್ಯಜಿಸಲು ಇಚ್ಚಿಸಿದರೆ ಆ ಕುರಿತು ಒಂದು ತಿಂಗಳ ಮುಂಚಿತವಾಗಿ ಪ್ರಾಧಿಕಾರಕ್ಕೆ ಮಾಹಿತಿ ನೀಡತಕ್ಕದ್ದು.
- ನೇಮಕಗೂಂಡ ಅಭ್ಯರ್ಥಿಗಳು ಸರ್ಕಾರ ವಿಧಿಸಿರುವ ನೀತಿ ನಿಯಮಗಳಿಗೆ ಬದ್ದರಾಗಿರತಕ್ಕದ್ದು ಹಾಗೂ ಮೇಲಾಧಿಕಾರಿಗಳ ಆದೇಶವನ್ನು ಪಾಲಿಸತಕ್ಕದ್ದು.
- ಅಪೂರ್ಣ ವಿರುವ ಅರ್ಜಿಗಳನ್ನು, ದಾಖಲೆ ಲಗಿತ್ತಿಸದ ಮತ್ತು ತಪ್ಪು ಮಾಹಿತಿ ಇರುವ ಅರ್ಜಿಗಳನ್ನು ತಿರಸ್ಕರಿಸುವ ಹಕ್ಕು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ಇರುತ್ತವೆ.
- ವಿಶೇಷ ಸೂಚನೆಃ ಅರ್ಹ ಅಭ್ಯರ್ಥಿಗಳಿಗೆ ಮೌಖಿಕ ಸಂದರ್ಶನದ ದಿನಾಂಕವನ್ನು ದೂರವಾಣಿ ಸಂದೇಶ ಅಥವಾ e-mail ಸಂದೇಶದ ಮೂಲಕ ಮಾತ್ರ ಕಳುಹಿಸಲಾಗುವುದು.

ಗೌರವಾನ್ವಿತ ಅಧ್ಯಕ್ಷರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಲಬುರಗಿ
ಇವರ ಆದೇಶದ ಮೇರಿಗೆ

14/10/2025

(ಶ್ರೀನಿವಾಸ ನವಲೆ)
ಹಿರಿಯ ಸಿವಿಲ್ ನ್ಯಾರಾಧೀಶರು ಮತ್ತು,
ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ಕಲಬುರಗಿ.

ದಿನಾಂಕ:14.10.2025

## APPLICATION FOR THE POST OF OFFICE ASSISTANT / CLERK IN LEGAL AID DEFENSE COUNSEL OFFICE.

PHOTO WITH SIGNATURE

Name of the District: Kalaburagi

Post Applied:

| | | | |
|---|---|---|---|
| 1 | Applicant's Name | : | |
| 2 | Father/Husband's Name | : | |
| 3 | Date of Birth | : | |
| 4 | Age on 01.10.2025 | : | |
| 5 | Gender<br>Male/Female/Transgender | : | |
| 6 | Nationality | : | |
| 7 | Caste/Category/Community<br>(Attach documents) | : | |
| 8 | Religion | : | |
| 9 | Mother Tongue | : | |
| 10 | Languages Known | : | |
| 11 | Residential Address | : | |
| 12 | Contact Details: | | |
| | a. Mobile.No.(O) | : | |
| | b. Telephone.No.(R) | : | |
| | e. E-mail ID | : | |
| 13 | PAN No. | : | |
| 14 | AADHAR No. | : | |
| 15 | Marital Status | : | Married ☐ Unmarried ☐ |
| 16 | Others work Experience if any | | |

| | | | |
|---|---|---|---|
| 17 | Educational Qualification (Please enclose self-attested copies of document) | : | |

| Education Qualification | Name of Board/ University | Year of Passing | Obtained Percentage (aggregate) |
|---|---|---|---|
| SSLC | | | |
| PUC | | | |
| Degree | | | |
| Any other Extra Qualifications/activities(if any) | | | |
| Typing Education | | | |
| Computer Education | | | |

| | | | |
|---|---|---|---|
| 18 | Whether the applicant ever debarred/disqualified or found ineligible for candidature in any examination process of any public services conducted by any Public Authority? If so, furnish details. | : | |
| 19 | Whether he/she is compulsorily retired, removed or dismissed from any services in Government/Statutory Body/Local Authority? If so, furnish details. | : | |
| 20 | Whether the applicant is ever prosecuted or convicted and sentenced in any criminal cases or whether appearing before any criminal court in respect of any criminal cases/FIR pending against? If so, furnish particulars regarding the same. | : | |
| 21 | Whether the candidate is employed with State/Central/Public Sector/Private Sector or any other Job or assignment etc., if ever employed as such, to furnish particulars as to whether his/her services is terminated while in service. If yes, furnish the details. | : | |

## DECLARATION

I hereby declare that all the statements made in this application are true, complete and correct to the best of my knowledge and belief. In the event of any information being found false/incorrect at any stage, my candidature is liable to be cancelled. I have read and understood the instructions and terms of the engagement and agree to abide by those. I declare that I fulfill the eligibility conditions for the category to which I am seeking engagement. I declare that I have never been penalized by any Court/Authority in any case/Disciplinary Proceedings. I also undertake to maintain absolute integrity and discipline as required there under. I agree with the remuneration structure and all the terms and conditions notified by KSLSA/DLSA concerned.

Place:________________

Date:________________

Signature of the applicant